# ತುಂಟ ಮಕ್ಕಳು ಮತ್ತು ಪೋಷಕರ ಪಡಿಪಾಟಲು

**ಮಕ್ಕಳ ತುಂಟಾಟ ಕೆಲವೊಮ್ಮೆ ಪೋಷಕರನ್ನು ಇಕ್ಕಟ್ಟಿಗೆ ಸಿಲುಕಿಸುತ್ತದೆ. ಮಕ್ಕಳಿಗೆ ಶಿಸ್ತನ್ನು ಕಲಿಸುವುದೂ ಒಂದು ಕಲೆ.**

■ ಸ್ವಯಂಪ್ರಭಾ

ಶುಭಾಂಗಿ ಮತ್ತು ಅವಳ ಅಮ್ಮ ಇತ್ತೀಚೆಗೆ ಮೈಸೂರಿನಲ್ಲಿ ಸ್ನೇಹಿತರ ಮನೆಗೆ ಹೋಗಿದ್ದರು. ಸ್ನೇಹಿತರ ಮನೆಯಲ್ಲಿ ಮಕ್ಕಳು ಪುಟಚೆಂಡಿನಂತೆ ಚುರುಕಾಗಿ ಓಡಾಡುತ್ತಿದ್ದರು. ಅವರೊಡನೆ ಆಟವಾಡುತ್ತ, ಕುಣಿಯುತ್ತ ಇದ್ದ ಶುಭಾಂಗಿಗೆ ಸ್ವಲ್ಪ ಹೊತ್ತಿಗೇ ಬೋರು ಎನಿಸಿ, ಮೊಬೈಲ್ ನೆನಪಾಯಿತು. ಅಮ್ಮನೊಡನೆ 'ಮೊಬೈಲ್ ಕೊಡು ಎನ್ನುತ್ತಾ ಅಳಲು ಶುರು ಮಾಡಿದಳು. ಕಿರುಚಾಡಿ, ನೆಲದ ಮೇಲೆ ಹೊರಳಾಡುತ್ತಿದ್ದ ಮಗಳನ್ನು ಕಂಡ ಅಮ್ಮನಿಗೆ ಬೇಸರವಾಯಿತು. ಮಗುವನ್ನು ಸಮಾಧಾನ ಮಾಡಲು ಬೇರೆ ದಾರಿ ಕಾಣದೇ ಮೊಬೈಲ್ ಕೊಟ್ಟುಬಿಟ್ಟರು. ಶುಭಾಂಗಿ ಕುಣಿಯುತ್ತ ಕುಣಿಯುತ್ತಾ ಕೊಠಡಿಯೊಳಗೆ ತೆರಳಿ ಮೊಬೈಲ್‌ನಲ್ಲಿ ಮುಳುಗಿದಳು.

ಸ್ನೇಹಿತರ ಮಕ್ಕಳಾದ ಆರುಷಿ, ಅರುಣಿಮಾ – ಇಬ್ಬರಿಗೂ ಇನ್ನೂ ಮೊಬೈಲ್‌ನ ಅರಿವಿರಲಿಲ್ಲ. ಎಲ್‌ಕೆಜಿ ಓದುತ್ತಿದ್ದ ಅವಳಿ ಮಕ್ಕಳಿಗೆ, ಶುಭಾಂಗಿಯಕ್ಕನ ಈ ಅವತಾರ ಕಂಡು ಅಚ್ಚರಿಯೆನಿಸಿತು. ಅವರ ಅಮ್ಮನಿಗೂ ಇರುಸುಮುರುಸು.

ಸಾಮಾನ್ಯವಾಗಿ ಅತಿಥಿಗಳಾಗಿ ಬೇರೆಯವರ ಮನೆಗೆ ಹೋದಾಗ ಮಕ್ಕಳ ವಿಚಾರಕ್ಕೆ ಹೀಗೆ ಮುಜುಗರ ಆಗುವುದುಂಟು. ಆತಿಥೇಯ ಮನೆಯವರ ಮಕ್ಕಳೂ ಹೀಗೆಯೇ ವರ್ತಿಸುವುದಿಲ್ಲ ಎಂದೇನೂ ಇಲ್ಲ. ಇವರನ್ನೆಲ್ಲಾ ಹೇಗಪ್ಪಾ ನಿಭಾಯಿಸುವುದು ಎನ್ನುತ್ತಾ ಪೋಷಕರು ಕಂಗಾಲಾಗಿಬಿಡುತ್ತಾರೆ.

ಮೊನ್ನೆ ಸೀಮಂತ್ ಕುಮಾರ್ ಎಂಬ ಪುಟ್ಟ ಹುಡುಗ ಅಜ್ಜಿಯೊಡನೆ ದೊಡ್ಡಪ್ಪನ ಮನೆಗೆ ಹೋಗಿದ್ದಾಗ ಹೀಗೆಯೇ ಆಯಿತು. ಯುಕೆಜಿಯಲ್ಲಿ ಕಲಿಯುವ ಸೀಮಂತ್ ಮನೆಯ ಎಲ್ಲ ಕಪಾಟುಗಳ ಬಾಗಿಲನ್ನೂ ತೆಗೆಯುವುದು, ಅದರೊಳಗಿನಿಂದ ವಸ್ತುಗಳನ್ನು ತೆಗೆದು ಚೆಲ್ಲಾಡುವುದರಲ್ಲಿ ನಿರತನಾಗಿಬಿಟ್ಟ. ದೊಡ್ಡವರು ಹಾಲ್‌ನಲ್ಲಿ ಕುಳಿತು ಮಾತನಾಡುವಾಗ ಮಕ್ಕಳ ಈ ಆಟಗಳನ್ನು ಗಮನಿಸುವುದು ಸಾಧ್ಯವಾಗುವುದಿಲ್ಲ. ಆದರೆ ಡ್ರಾಗಳನ್ನು ತೆಗೆಯುವುದು, ಪುಸ್ತಕದ ಕಪಾಟುಗಳಿಂದ ಪುಸ್ತಕಗಳನ್ನು ತೆಗೆಯುವುದು, ಪಿಗ್ಗಿ ಬ್ಯಾಂಕ್ ಅನ್ನು ಕುಟ್ಟಿ ಹಾಕುವುದು... ಮುಂತಾಗಿ ಮಕ್ಕಳು ತುಂಟಾಟ ಮಾಡುತ್ತಲೇ ಇದ್ದಾಗ, ದೊಡ್ಡವರು ಸ್ವಲ್ಪ ಗದರಲೇಬೇಕಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಪುಟ್ಟ ಮಕ್ಕಳಿಗೆ ದೊಡ್ಡವರು ಬೈಯುವುದು, ಗದರುವುದು ಬಹಳ ಕಡಿಮೆಯೇ. ಅದು ಒಳ್ಳೆಯದು ಕೂಡ. ಮಕ್ಕಳಿಗೆ ತಿಳಿ ಹೇಳುವುದು ಮತ್ತು ಅವರಿಗೆ ವಿವರಿಸಿ ಅರ್ಥ ಮಾಡಿಸುವುದೇ ನಿಜವಾದ ಕಲಿಕಾ ವಿಧಾನ. ಅದು ಸುಂದರ ವಿಧಾನವೂ ಹೌದು. ಆದರೆ ಈ ಪ್ರಕ್ರಿಯೆ ಬಹಳ ದೀರ್ಘವಾದುದು. ಆದುದರಿಂದ ನೆಂಟರ ಮನೆಗೆ, ಸ್ನೇಹಿತರ ಮನೆಗೆ ಹೋದಾಗ, ಮಕ್ಕಳಿಂದ ಅವರಿಗಾಗಲೀ, ಅಲ್ಲಿರುವ ಮಕ್ಕಳ ಶಿಸ್ತಿಗಾಗಲೀ ತೊಂದರೆಯಾಗದಂತೆ ಕಾಳಜಿ ವಹಿಸುವುದು ಅಗತ್ಯ.

ತುಂಟ ಮಕ್ಕಳನ್ನು ನಿಭಾಯಿಸುವ ದೃಷ್ಟಿಯಿಂದ ಅವರೊಡನೆ ದೊಡ್ಡವರು ಇಬ್ಬರು ಜೊತೆಯಾಗಿ ಹೋಗುವುದು ಒಳ್ಳೆಯದು. ಅಲ್ಲದೆ, ಹೋಗುವ ಮುನ್ನವೇ, ಇತರರ ಮನೆಯ ಶಿಸ್ತನ್ನು ಪಾಲಿಸಲು ಬದ್ಧರಾಗಿರಬೇಕು ಎಂಬ ಕಿವಿಮಾತನ್ನೂ ಮಕ್ಕಳಿಗೆ ಹೇಳಬೇಕಾಗುತ್ತದೆ. ಇತರರ ಮನೆಯ ಚಾವಡಿಯಲ್ಲಿ, ಹಾಲ್‌ನಲ್ಲಿ ಅಥವಾ ಅಂಗಳದಲ್ಲಿ ಆಟವಾಡಬಹುದೇ ವಿನಾ ಅವರ ಬೆಡ್ ರೂಮ್‌ಗೆ ಹೋಗುವಂತಿಲ್ಲ. ಅಲ್ಲಿ ಆಟವಾಡುವುದು, ಬೊಂಬೆಗಳನ್ನು ಎಲ್ಲೆಂದರಲ್ಲಿ ಚೆಲ್ಲಾಡುವುದು ತರವಲ್ಲ ಎಂಬ ಮಾತನ್ನು ಮಕ್ಕಳಿಗೆ ಹೇಳಬೇಕಾಗುತ್ತದೆ. ಉಭಯಕುಶಲೋಪರಿ ಮಾತನಾಡುವ ವೇಳೆಯಲ್ಲಿಯೂ ಮಕ್ಕಳ ಮೇಲೆ ನಿಗಾ ಇಡುವ ಮೂಲಕ ಅಲ್ಲಿ ಹೆಚ್ಚು ತೊಂದರೆ ಸೃಷ್ಟಿಯಾಗದಂತೆ ಎಚ್ಚರ ವಹಿಸಬೇಕು.

ಮಕ್ಕಳ ದೆಸೆಯಿಂದಲೇ ದೊಡ್ಡವರ ನಡುವೆ ಎಷ್ಟೋ ಸಂದರ್ಭಗಳಲ್ಲಿ ಮನಸ್ತಾಪ ಸೃಷ್ಟಿಯಾಗುವುದುಂಟು. ಒಮ್ಮೆ ಹೀಗಾಯಿತು. ಶುಭಾಂಗಿ ಮತ್ತು ಅವಳ ಮನೆಯವರೂ, ಪಕ್ಕದ ಮನೆಯವರೂ ಟೌನ್ ಹಾಲ್‌ನಲ್ಲಿ ನಡೆಯುತ್ತಿದ್ದ ಕಾರ್ಯಕ್ರಮವೊಂದಕ್ಕೆ ತೆರಳಿದ್ದರು. ಅಲ್ಲಿ ಮತ್ತೆ ಶುಭಾಂಗಿಗೆ ಮೊಬೈಲ್ ಬೇಕು ಅನಿಸಿದಾಗ ಅಮ್ಮನ ಬಳಿ ವರಾತ ಶುರು ಮಾಡಿದಳು. ಅಮ್ಮ ಮೊಬೈಲ್ ಕೊಡದೇ ಇದ್ದಾಗ ಇತರರ ಬಳಿ 'ಮೊಬೈಲ್ ಕೊಡಿ' ಎಂದು ಕೇಳಿದಳು. ಅವರೂ ಪುಟ್ಟಿಯ ಬೇಡಿಕೆಯನ್ನು ನಯವಾಗಿ ನಿರಾಕರಿಸಿ ಗಮನ ಬೇರೆಕಡೆ ಸೆಳೆಯಲು ಯತ್ನಿಸಿದರು. ಶುಭಾಂಗಿಗೇಕೋ ಸಿಟ್ಟು ಬಂದು, ನೆರೆಮನೆಯ ಆಂಟಿಯ ಬೆರಳುಗಳನ್ನು ಚೆನ್ನಾಗಿ ಕಚ್ಚಿಬಿಟ್ಟಿದ್ದಳು. ಹೀಗೆ ಶುರುವಾದ ಜಗಳವು ಬಗೆಹರಿಯದೇ ಉಳಿಯಿತು.

ತುಂಟ ಮಕ್ಕಳು ಮತ್ತು ಹಟ ಮಾಡುವ ಮಕ್ಕಳನ್ನು ಹೊರಗೆ ಕರೆದೊಯ್ಯುವುದು ಪೋಷಕರಿಗೆ ಸವಾಲಿನ ಕೆಲಸವೇ ಸರಿ. ಮಕ್ಕಳ ತುಂಟಾಟ ಮಿತಿ ಮೀರುತ್ತಿದೆ ಎಂದಮಾತ್ರಕ್ಕೆ ಅವರನ್ನು ಎಲ್ಲಿಯೂ ಕರೆದೊಯ್ಯದೇ ಇದ್ದರೂ ಕಷ್ಟವೇ. ಅವರಿಗೆ ಸಾಮಾಜಿಕವಾಗಿ ಹೇಗೆ ವರ್ತಿಸಬೇಕು ಎಂಬ ಪಾಠವೇ ಸಿಗುವುದಿಲ್ಲ. ಆದ್ದರಿಂದ ಮಕ್ಕಳು ಸಾಮಾಜಿಕವಾಗಿ ಬೆರೆಯುವುದು ಹೇಗೆ ಎಂಬುದನ್ನು ಕಲಿಸುವ ರೀತಿಯಲ್ಲಿ ಓಡಾಟಗಳನ್ನು ರೂಪಿಸುವುದು ಅತ್ಯಗತ್ಯ. ಕೆಲವು ಮಕ್ಕಳಿಗೆ ಈ ರೀತಿ ಪದೇ ಪದೇ ತಿಳಿ ಹೇಳುತ್ತಿರಬೇಕಾಗುತ್ತದೆ. ಮತ್ತೆ ಕೆಲವು ಮಕ್ಕಳಿಗೆ ಒಂದೆರಡು ಬಾರಿ ಹೇಳಿದರೆ ಸಾಕಾಗುತ್ತದೆ.

ಪ್ರತಿಕ್ರಿಯಿಸಿ:
feedback@sudha.co.in

